**ಸಂ: ಲೋಇ:513:ಆಕೋ 3:2001 ದಿನಾಂಕ 19.11.2001**

**ಸುತ್ತೋಲೆ**

ವಿಷಯ: ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮಗಳು 2000 ಕಾಯ್ದೆಗೆ ಸಂಬಂಧಿಸಿದ ಹೊಸ ತಿದ್ದುಪಡಿ ಬಗ್ಗೆ ಸ್ಪಷ್ಟೀಕರಣ.

ಉಲ್ಲೇಖ: ಸುತ್ತೋಲೆ ಸಂಖ್ಯೆ: ಲೋಇ 33 ಆಕೋ3/2001, ದಿನಾಂಕ 21.3.2001

1. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999ನ್ನು ಆಕ್ಟೋಬರ್ 4, 2000 ರಿಂದ ಜಾರಿಗೆ ಬಂದಿರುವುದು ಎಲ್ಲಾ ಸರ್ಕಾರಿ ಇಲಾಖೆಗಳಿಗೆ, ಸಾರ್ವಜನಿಕ ಉದ್ದಿಮೆಗಳಿಗೆ, ಸ್ಥಳೀಯ ಸಂಸ್ಥೆಗಳ ಗಮನಕ್ಕೆ ಈಗಾಗಲೇ ಬಂದಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು, 2000 ಗಳನ್ನು ಸಹಾ ದಿನಾಂಕ 24.10.2000 ರಂದು ಪ್ರಕಟಗೊಳಿಸಲಾಗಿದೆ. ಈ ಸಂಬಂಧ ಆರ್ಥಿಕ ಇಲಾಖೆಯಿಂದ ಸುತ್ತೋಲೆ ಸಂಖ್ಯೆ: ಲೋಇ 33 ಆಕೋ-3/2001, ದಿನಾಂಕ 21.3.2001ರಲ್ಲಿ ಕೆಲವು ಸ್ಪಷ್ಟೀಕರಣಗಳನ್ನು ಸಹಾ ನೀಡಲಾಗಿದೆ.

2. ಎಲ್ಲಾ ಸರಕು ಖರೀದಿ ಸಂಸ್ಥೆಗಳು ಅಧಿಸೂಚನೆ ಸಂಖ್ಯೆ: ಲೋಇ 33 ಆಕೋ-3/2001, ದಿನಾಂಕ 25.8.2001ನ್ನು ಕರ್ನಾಟಕ ವಿಶೇಷ ರಾಜ್ಯ ಪತ್ರ ದಿನಾಂಕ: 25.8.2001ರಲ್ಲಿ ಪ್ರಕಟಪಡಿಸಿರುವುದನ್ನು ಸಹಾ ಗಮನಿಸಿರಬಹುದು. ಮೇಲ್ಕಾಣಿಸಿದ ತಿದ್ದುಪಡಿ ಕಾಯ್ದೆಯನ್ನು ಕಲಂ 4(ಇ) ಮತ್ತು (ಇಇ) ಗಳ ಉಪಬಂಧಗಳನ್ನು ಸೇರಿಸಿ ಹೊರಡಿಸಿದ್ದಾಗಿದೆ.

3. ಹೊಸ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ, 2001ರ ಕಲಂ 4(ಇ) ಪ್ರಕಾರ ಸರ್ಕಾರಿ ಇಲಾಖೆಗಳು/ಸಂಸ್ಥೆಗಳು ಅದರಡಿಯಲ್ಲಿ ಕೆಳಗೆ ಕಾಣಿಸಿದ ಸಂದರ್ಭಗಳಲ್ಲಿ ಕಾಯ್ದೆ ಅನ್ವಯಿಸುವುದಿಲ್ಲ ಎಂದು ತಿಳಿಸಲಾಗಿದೆ.

ಸರ್ಕಾರದ ಇಲಾಖೆಗಳಿಂದ, ರಾಜ್ಯ ಸರ್ಕಾರದ ಉದ್ದಿಮೆಗಳಿಂದ ಅಥವಾ ಕಾನೂನಿನ ಮೂಲಕ ಅಥವಾ ಅದರಡಿಯಲ್ಲಿ ಸ್ಥಾಪಿತವಾದ ಸರ್ಕಾರದ ಒಡೆತನ ಅಥವಾ ನಿಯಂತ್ರಣದಲ್ಲಿರುವ ಯಾವುದೇ ಮಂಡಳಿ ಅಥವಾ ನಿಗಮದಿಂದ ಜಿಲ್ಲಾಪಂಚಾಯತ್‌ಗಳು ನಗರ ಮುನಿಸಿಪಲ್ ಕಾರ್ಪೊರೇಷನ್‌ಗಳು ಅಥವಾ ನಗರ ಮುನಿಸಿಪಲ್ ಕೌನ್ಸಿಲ್‌ಗಳು ಅಥವಾ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ, ಮಲ್ನಾಡ್ ಅಭಿವೃದ್ಧಿ ಮಂಡಳಿ ಅಥವಾ ಬಯಲು ಸೀಮೆ ಅಭಿವೃದ್ಧಿ ಮಂಡಳಿಗಳಿಂದ ಕೈಗೊಳ್ಳುವ

(i) ಐದು ಲಕ್ಷ ರೂಪಾಯಿಗಳವರೆಗಿನ ಯಾವುದೇ ನಿರ್ಮಾಣ ಕಾಮಗಾರಿಗಳನ್ನು ಕೈಗೊಂಡ ಸಂದರ್ಭಗಳಲ್ಲಿ

(ii) ನಿರ್ಮಾಣ ಕಾಮಗಾರಿಗಳನ್ನು ಹೊರತುಪಡಿಸಿ ಉಳಿದಂತೆ ಯಾವುದೇ ಸರಕು ಖರೀದಿ ಅಥವಾ ಸೇವೆ ಪಡೆಯುವ ಸಂದರ್ಭದಲ್ಲಿ ಒಂದು ಲಕ್ಷ ರೂಪಾಯಿಗಳಿಗೂ ಮೀರದ ಸಂದರ್ಭದಲ್ಲಿ.

4. ಅದೇ ರೀತಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಕಾಯ್ದೆಯ ಹೊಸ ಉಪಬಂಧದ ಕಲಂ 4(ಇಇ) ಪ್ರಕಾರ ಕಾಯ್ದೆಯು ಸರ್ಕಾರಿ ಇಲಾಖೆಗಳು/ಸಂಸ್ಥೆಗಳು ಕೆಳಗೆ ಕಾಣಿಸಿದ ಸಂದರ್ಭಗಳಲ್ಲಿ ಕಾಯ್ದೆ ಅನ್ವಯಿಸುವುದಿಲ್ಲ ಎಂದು ತಿಳಿಸಲಾಗಿದೆ.

ಗ್ರಾಮ ಪಂಚಾಯಿತಿಗಳು ಮತ್ತು ತಾಲ್ಲೂಕು ಪಂಚಾಯಿತಿಗಳು, ಪಟ್ಟಣ ಪುರಸಭೆಗಳು ಅಥವಾ ಪಟ್ಟಣ ಪಂಚಾಯತಿಗಳು ಅಥವಾ ನಗರಾಭಿವೃದ್ಧಿ ಪ್ರಾಧಿಕಾರಗಳು ಕೈಗೊಳ್ಳುವ

(i) ಯಾವುದೇ ಕಿರು ನೀರು ಸರಬರಾಜು ಯೋಜನೆಯ ಅನುಷ್ಠಾನ ಅಥವಾ ಶಾಲಾಕೊಠಡಿಗಳ ನಿರ್ಮಾಣದ ಕಾಮಗಾರಿಯ ವೆಚ್ಚ ಎರಡು ಲಕ್ಷ ರೂಪಾಯಿಗಳಿಗೂ ಮೀರದಂತಿದ್ದರೆ.

(ii) ಇತರೆ ಯಾವುದೇ ಉದ್ದೇಶಕ್ಕಾಗಿ ಸರಕು ಖರೀದಿ ಸಂಗ್ರಹಣಾ ವಸ್ತು ಅಥವಾ ಸೇವೆಯ ಮೌಲ್ಯ ಒಂದು ಲಕ್ಷ ರೂಪಾಯಿಗಳಿಗೆ ಮೀರದಂತಿದ್ದರೆ.

5. ಈ ಸಂಬಂಧ ಮೇಲ್ಕಾಣಿಸಿದ ಕಾಯ್ದೆಗೆ ತಿದ್ದುಪಡಿ ಮಾಡಿದ ನಂತರ ಹಲವಾರು ಇಲಾಖೆಗಳು, ಸಂಸ್ಥೆಗಳು ವ್ಯಕ್ತಪಡಿಸಿರುವ/ಕೋರಿರುವ ಅಭಿಪ್ರಾಯಗಳ ಕುರಿತಂತೆ ಪರಿಶೀಲಿಸಿ ಕೆಳಕಾಣಿಸಿದ ಸ್ಪಷ್ಟೀಕರಣಗಳನ್ನು ನೀಡಲಾಗಿದೆ.

"ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ, 1999ರ ಕಲಂ 26ರಲ್ಲಿ ತಿಳಿಸಿದಂತೆ ಸದರಿ ಕಾಯ್ದೆ ಅನ್ವಯಿಸದಿರುವ ಸಂದರ್ಭಗಳಲ್ಲಿ ಈ ಕಾಯ್ದೆ ಜಾರಿಗೆ ಬರುವ ಮುನ್ನ ಇಲಾಖೆಯಲ್ಲಿ ಪಾಲಿಸುತ್ತಿದ್ದ ನಿಯಮಗಳು, ಇಲಾಖಾ ಸಂಹಿತೆ, ಆದೇಶ ಇತ್ಯಾದಿಗಳು ಪಾಲಿಸಬೇಕಾಗುತ್ತದೆ ಎಂದು ತಿಳಿಸಲಾಗಿದೆ. ಆ ಪ್ರಕಾರ ಮೇಲೆ ತಿಳಿಸಿದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ ಅನ್ವಯಿಸದೆ ಇರುವ ಸಂದರ್ಭಗಳಲ್ಲಿ ಕಲಂ 26 ರ ಪ್ರಕಾರ ಕ್ರಮ ಜರುಗಿಸಬೇಕು. ಐದು ಲಕ್ಷ ರೂಪಾಯಿಗಳ ಅಥವಾ ಎರಡು ಲಕ್ಷಗಳ ವರೆಗೆ ಕೈಗೊಳ್ಳುವ ಕಾಮಗಾರಿಗಳ ಬಗ್ಗೆ ಹಾಗೂ ಒಂದು ಲಕ್ಷ ರೂಪಾಯಿಗಳ ಮೌಲ್ಯದ ವರೆಗೆ ಖರೀದಿಸುವ/ಕೈಗೊಳ್ಳುವ ಕಾಮಗಾರಿಗಳ ಬಗ್ಗೆ ಹಾಗೂ ಒಂದು ಲಕ್ಷ ರೂಪಾಯಿಗಳ ಮೌಲ್ಯದ ವರೆಗೆ ಖರೀದಿಸುವ/ಪಡೆಯುವ ಸರಕು/ಸೇವೆಗಳ ಸಂದರ್ಭದಲ್ಲಿ ಈಗಾಗಲೇ ಜಾರಿಯಲ್ಲಿರುವ ನಿಯಮಗಳನ್ನು ಇಲಾಖಾ ಸಂಹಿತೆಗಳು ಸರ್ಕಾರಿ ಆದೇಶ/ಸೂಚನೆಗಳಂತೆ ಕ್ರಮ ಕೈಗೊಳ್ಳಬೇಕು. ಸರ್ಕಾರಿ ಆದೇಶ ಸಂ:ಪಿಡಬ್ಲ್ಯೂಡಿ 1 ಎಫ್‌ಸಿಆರ್ 93, ದಿನಾಂಕ: 15.12.1994ರ ಪ್ರಕಾರ ಒಂದು ಲಕ್ಷ ರೂಪಾಯಿಗಳ ವರೆಗೆ ಮಾತ್ರ ಲೋಕೋಪಯೋಗಿ ಇಲಾಖೆಯಲ್ಲಿ ತುಂಡುಗುತ್ತಿಗೆ ನೀಡಲು ಅವಕಾಶ ಇರುತ್ತದೆ. ಆದುದರಿಂದ ಐದು ಲಕ್ಷ ರೂಪಾಯಿ ಅಥವಾ ಎರಡು ಲಕ್ಷ ರೂಪಾಯಿಗಳ ವರೆಗಿನ ಕಾಮಗಾರಿಗಳನ್ನು ಕೈಗೊಳ್ಳುವಾಗ ಹಾಗೂ ಒಂದು ಲಕ್ಷ ರೂಪಾಯಿಗಳ ವರೆಗೆ ಸರಕು ಖರೀದಿ ಅಥವಾ ಸೇವೆಗಳನ್ನು ಪಡೆಯುವಾಗ ಟೆಂಡರ್ ನಿಯಮಗಳನ್ನು ಪಾಲಿಸಬೇಕು. ಹಾಗೆಯೇ ಐದು ಲಕ್ಷ ರೂಪಾಯಿಗಳು ಅಥವಾ ಎರಡು ಲಕ್ಷ ರೂಪಾಯಿಗಳ ವರೆಗಿನ ಕಾಮಗಾರಿಗಳನ್ನು ಇಲಾಖಾ ವತಿಯಿಂದ ನಿರ್ವಹಿಸಲು ಸಂಬಂಧಿಸಿದ ಇಲಾಖೆಗಳಲ್ಲಿ ಸ್ವಾಯತ್ ಸಂಸ್ಥೆ, ನಿಗಮ, ಮಂಡಳಿಗಳಲ್ಲಿ ಅವಕಾಶ ಇದ್ದರೆ ಕ್ರಮ ತೆಗೆದುಕೊಳ್ಳಬಹುದಾಗಿದೆ. ತಿದ್ದುಪಡಿ ಕಾಯ್ದೆಯಲ್ಲಿ ತಿಳಿಸಿರುವ ಪ್ರಕರಣಗಳ ಸಂಬಂಧಿಸಿದಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ, 1999 ಹಾಗೂ ನಿಯಮಗಳು, 2000 ಉಪಬಂಧಗಳನ್ನು ಮಾತ್ರ ಪಾಲಿಸಬೆಕಾಗಿಲ್ಲ. ಇಂಥ ಸಂದರ್ಭಗಳಲ್ಲಿ ಟೆಂಡರ್ ಪ್ರಕ್ರಿಯೆಯಂತೆಯೆ ಕ್ರಮ ಕೈಗೊಳ್ಳಬೇಕು ಹಾಗೂ ಕಾಯ್ದೆಯ ಕಲಂ 26 ರಲ್ಲಿ ಕಾಣಿಸಿರುವ ಇಲಾಖಾ ಸಂಹಿತೆ, ನಿಯಮಗಳು, ಸರ್ಕಾರಿ ಆದೇಶಗಳಂತೆ ಕ್ರಮ ಜರುಗಿಸಬೇಕು ಎಂದು ಸ್ಪಷ್ಟಪಡಿಸಲಾಗಿದೆ. ಈ ಬಗ್ಗೆ ಕಾಯ್ದೆಯಲ್ಲಿ ಈ ಮುಂಚೆ ಇದ್ದ ಅವಕಾಶ ಹಾಗೂ ತಿದ್ದುಪಡಿ ನಂತರ ಮಾಡಲಾದ ಅವಕಾಶದ ವಿವರಗಳನ್ನು ಲಗತ್ತಿಸಿದ ಪಟ್ಟಿಯಲ್ಲಿ ಕಾಣಿಸಿದೆ."

**(ಚಿರಂಜೀವಿ ಸಿಂಗ್)**
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಆರ್ಥಿಕ ಇಲಾಖೆ.

**ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ, 1999 ಕಲಂ 4(ಇ) ಅಡಿಯಲ್ಲಿ ಈ ಮುಂಚೆ ಇದ್ದ ಅವಕಾಶಗಳು ಹಾಗೂ ನಂತರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ (ತಿದ್ದುಪಡಿ) ಕಾಯ್ದೆ, 2001ರಲ್ಲಿ ಕಲಂ 4(ಇ) ಮತ್ತು (ಇಇ) ರಲ್ಲಿ ಮಾಡಲಾದ ಅವಕಾಶಗಳ ಬಗ್ಗೆ ಹೋಲಿಕೆ ಪಟ್ಟಿ.**

| ಸಂಗ್ರಹಣಾ ಸಂಸ್ಥೆಗಳು | ಕ.ಸಾ.ಸಂ.ಪಾ.ಕಾಯ್ದೆ 1999ರ ಕಲಂ 4(ಇ) ರಲ್ಲಿ ಇದ್ದ ಅವಕಾಶಗಳು | | ಕ.ಸಾ.ಸಂ. ಕಾಯ್ದೆ 2001ರ ಕಲಂ 4(ಇ) ಮತ್ತು 4(ಇಇ) ರಲ್ಲಿ ಇರುವ ಅವಕಾಶಗಳು | |
|---|---|---|---|---|
| | ನಿರ್ಮಾಣ ಕಾಮಗಾರಿಗಳು | ಸರಕುಗಳ ಖರೀದಿ | ನಿರ್ಮಾಣ ಕಾಮಗಾರಿಗಳು | ಸರಕುಗಳ ಖರೀದಿ |
| ಸರ್ಕಾರಿ ಇಲಾಖೆಗಳು | 5.00 ಲಕ್ಷ ರೂ.ಗಳ ವರೆಗೆ | 5.00 ಲಕ್ಷ ರೂ.ಗಳ ವರೆಗೆ | 5.00 ಲಕ್ಷ ರೂ.ಗಳ ವರೆಗೆ | 1.00 ಲಕ್ಷ ರೂಗಳ ವರೆಗೆ |
| ರಾಜ್ಯ ಸಾರ್ವಜನಿಕ ಉದ್ದಿಮೆಗಳು, | ಅವಕಾಶ ಮಾಡಿರಲಿಲ್ಲ | ಅವಕಾಶ ಮಾಡಿರಲಿಲ್ಲ | 5.00 ಲಕ್ಷ ರೂ.ಗಳ ವರೆಗೆ | 1.00 ಲಕ್ಷ ರೂ.ಗಳ ವರೆಗೆ |
| ಮಂಡಳಿ, ನಿಗಮಗಳು ಜಿಲ್ಲಾ ಪಂಚಾಯತ್‌ಗಳು, ನಗರ ಮುನಿಸಿಪಲ್ ಕಾರ್ಪೋರೇಷನ್‌ಗಳು, ಸಿಟಿ ಮುನಿಸಿಪಲ್ ಕೌನ್ಸಿಲ್‌ಗಳು, ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ, ಮಲೆನಾಡು ಅಭಿವೃದ್ಧಿ ಮಂಡಳಿ | 2 ಲಕ್ಷ ರೂ.ಗಳ ವರೆಗೆ (ಕಿರುನೀರು ಸರಬರಾಜು ಮತ್ತು ಶಾಲಾ ಕಟ್ಟಡಗಳ ಕಾಮಗಾರಿಗಳ ಬಗ್ಗೆ) 1 ಲಕ್ಷ ರೂ.ಗಳ ವರೆಗೆ ಇತರೆ ಕಾಮಗಾರಿಗಳ ಬಗ್ಗೆ) | 1.00 ಲಕ್ಷ ರೂ.ಗಳ ವರೆಗೆ<br>1.00 ಲಕ್ಷ ರೂ.ಗಳ ವರೆಗೆ | 5.00 ಲಕ್ಷ ರೂ.ಗಳ ವರೆಗೆ<br>5.00 ಲಕ್ಷ ರೂ.ಗಳ ವರೆಗೆ | 1.00 ಲಕ್ಷ ರೂ.ಗಳ ವರೆಗೆ<br>1.00 ಲಕ್ಷ ರೂ.ಗಳ ವರೆಗೆ |
| ಬೈಲು ಸೀಮೆ ಅಭಿವೃದ್ಧಿ ಮಂಡಳಿ ಗ್ರಾಮ ಪಂಚಾಯ್ತಿಗಳು, ತಾಲ್ಲೂಕು ಪಂಚಾಯ್ತಿಗಳು, ಪಟ್ಟಣ ಮುನಿಸಿಪಲ್ ಕೌನ್ಸಿಲ್‌ಗಳು, ಪಟ್ಟಣ ಪಂಚಾಯ್ತಿಗಳು ಮತ್ತು ನಗರಾಭಿವೃದ್ಧಿ ಪ್ರಾಧಿಕಾರಿಗಳು | 2 ಲಕ್ಷ ರೂ.ಗಳವರೆಗೆ (ಕಿರುನೀರು ಸರಬರಾಜು ಮತ್ತು ಶಾಲಾ ಕಟ್ಟಡಗಳ ಕಾಮಗಾರಿಗಳ ಬಗ್ಗೆ) 1 ಲಕ್ಷ ರೂ.ಗಳ ವರೆಗೆ ಇತರೆ ಕಾಮಗಾರಿಗಳ ಬಗ್ಗೆ) | 1.00 ಲಕ್ಷ ರೂ.ಗಳ ವರೆಗೆ | 2 ಲಕ್ಷ ರೂ.ಗಳವರೆಗೆ (ಕಿರುನೀರು ಸರಬರಾಜು ಮತ್ತು ಶಾಲಾ ಕಟ್ಟಡಗಳ ಕಾಮಗಾರಿಗಳ ಬಗ್ಗೆ) 1 ಲಕ್ಷ ರೂ.ಗಳ ವರೆಗೆ ಇತರೆ ಕಾಮಗಾರಿಗಳ ಬಗ್ಗೆ) | 1.00 ಲಕ್ಷ ರೂ.ಗಳ ವರೆಗೆ |